ವರಸೆಗಳ ಗಿಡುಗಗಳು ಮತ್ತು ಹೊರದೇಶದ ವರಸೆಗಳ ವಿಶೇಷ ತಳಿಯ ಗಿಡುಗಗಳ ನಡುವೆ ಸ್ಪರ್ಧೆ. ಬಹಳ ಚಾಲೆಂಜಿಂಗ್' ಎಂದ.

'ಹೊರದೇಶದ ತರಬೇತುದಾರರು ಈಗ ಡ್ರೋನ್ ಬಳಸಿ ತರಬೇತಿ ನೀಡುತ್ತಿದ್ದಾರೆ. ನಾವು ವಿಜಯಿಗಳಾಗಬೇಕಾದರೆ ಅದನ್ನೂ ಮೀರಿ ಕೌಶಲ ತೋರಿಸಬೇಕಾಗಿದೆ. ಒಟ್ಟಿನಲ್ಲಿ ಬದುಕು ಸುಲಭವಿಲ್ಲ... ಸುಲಭವಿಲ್ಲ...' ಎಂದು ತನಗೇ ಹೇಳಿಕೊಳ್ಳುತ್ತ ನಡು ಮರುಭೂಮಿಯಲ್ಲಿ ಬಂದು ಗಾಡಿ ನಿಲ್ಲಿಸಿದ. ಗಾಡಿಯಿಳಿದು ಡಿಕ್ಕಿಯಿಂದ ಚೀಲಗಳನ್ನು ಹೊರತೆಗೆದು ಗಿಡುಗವನ್ನೂ ಕೆಳಗಿಳಿಸಿ ಇಬ್ಬರೂ ತರಬೇತಿ ಆರಂಭಿಸಲು ಸಿದ್ಧರಾದರು.

'ಈ ಗಿಡುಗನ ಮೇಲೆ ನನಗೆ ಅಪಾರ ನಂಬಿಕೆ, ನಿರೀಕ್ಷೆಗಳಿವೆ. ಇದುವರೆಗೂ ನಾನು ಸಣ್ಣಪುಟ್ಟ ಸ್ಪರ್ಧೆಗಳನ್ನು ಮಾತ್ರ ಗೆದ್ದಿರುವುದು. ಹಾಗಾಗಿ ಫಾಲ್ಕನ್ ಸಮುದಾಯದಲ್ಲಿ ಹೆಸರು ಮಾಡಲಾಗಿಲ್ಲ. ಫಾಲ್ಕನರಿ ಕುಟುಂಬದಲ್ಲಿ ಹುಟ್ಟಿ, ಜೀವಮಾನವಿಡೀ ಅದನ್ನೇ ಮಾಡಿ, ಮದುವೆಯಾದ ಇಬ್ಬರು ಹೆಂಡತಿಯರನ್ನು ಇದರ ಹುಚ್ಚಿಗೇ ಬಲಿಕೊಟ್ಟು, ಮಕ್ಕಳಿಂದ ದೂರವಾಗಿ ಇಲ್ಲದ ಕಷ್ಟನಷ್ಟ ಅನುಭವಿಸುತ್ತಿದ್ದೇನೆ. ಫಾಲ್ಕನರಿಯ ಗಂಧಗಾಳಿ ಗೊತ್ತಿಲ್ಲದವರು ಹಣ ಖರ್ಚು ಮಾಡಿ ಫಾರಿನ್ ತರಬೇತುದಾರರನ್ನು ತರಿಸಿ ಪ್ರಶಸ್ತಿ ಪದಕ ಗೆದ್ದು ಬೀಗುವುದನ್ನು ಇನ್ನು ನೋಡಲಾರೆ. ನನ್ನ ಶ್ರಮಕ್ಕೆ, ಅನುಭವಕ್ಕೆ ಏನು ಬೆಲೆ ಸಿಕ್ಕಿದೆ? ದೋಹಾದಲ್ಲಿ ವರ್ಷವರ್ಷ ದೊಡ್ಡ ಸ್ಪರ್ಧಾಕೂಟ ನಡೆಯುತ್ತದೆ. ಬಹುಮಾನ ಎಷ್ಟು ಗೊತ್ತಾ? ಅರ್ಧ ಮಿಲಿಯ ರಿಯಾಲು!... ಈ ವರ್ಷದ ಸ್ಪರ್ಧಾಕೂಟಕ್ಕೆ ಇನ್ನೂ ಆರು ತಿಂಗಳು ಇದೆ. ಅಷ್ಟರಲ್ಲಿ ಇದನ್ನು ನಾವು ತರಬೇತುಗೊಳಿಸಿಕೊಳ್ಳಬೇಕಿದೆ. ಗಿಡುಗನ ಮಾಲೀಕ ಹಾಗೂ ತರಬೇತುಗಾರನಾಗಿ ನನ್ನ ಪ್ರತಿಷ್ಠೆ ಶಾಶ್ವತವಾಗಿ ನೆಲೆನಿಲ್ಲಲು ನಾನು ದೋಹಾ ಸ್ಪರ್ಧಾಕೂಟದಲ್ಲಿ ಈ ಬಾರಿಯಾದರೂ ವಿಜಯಗಳಿಸಬೇಕು. ಹಾಗಾಗಿಯೇ ನನ್ನೆಲ್ಲಾ ಜೀವನ ಈ ಗಿಡುಗನನ್ನು ಅವಲಂಬಿಸಿದೆ. ಮನೆಯಲ್ಲಿರುವ ಆ ಆರು ಗಿಡುಗಗಳೂ ಹಲವಾರು ಪ್ರಶಸ್ತಿಗಳನ್ನು ಪಡೆದವುಗಳೇ. ಆದರೆ ದೋಹಾದಲ್ಲಿ ಅವುಗಳನ್ನು ಇಳಿಸುವ ಧೈರ್ಯವಿಲ್ಲ. ಗಾದಾ ಚಾಂಪಿಯನ್ ಲಕ್ಷಣಗಳಿರುವ ಗಿಡುಗ. ಬರುವ ಆದಾಯವೆಲ್ಲವನ್ನೂ ನಾನು ಇದರ ಮೇಲೆ ವೆಚ್ಚ ಮಾಡುತ್ತಿದ್ದೇನೆ. ಇದರ ಎಲ್ಲಾ ವ್ಯವಸ್ಥೆಗಳ ಮೇಲೂ ಕಟ್ಟೆಚ್ಚರ ವಹಿಸಿದ್ದೇನೆ. ನನ್ನ ಮರೆವು ಅಥವಾ ಅನುಪಸ್ಥಿತಿಯಲ್ಲಿ ಇದರ ಸಾಕಣೆಯಲ್ಲಿ ವ್ಯತ್ಯಾಸವಾಗಬಾರದೆಂದೇ ನಿನ್ನನ್ನು ನೇಮಿಸಿಕೊಂಡದ್ದು. ಆಹಾರ, ನೀರು, ಔಷಧಿ, ತರಬೇತಿ, ನಿದ್ದೆ ಇತ್ಯಾದಿ ಯಾವುದರಲ್ಲೂ ಊನವಾಗದ ರೀತಿಯಲ್ಲಿ ನೋಡಿಕೊಳ್ಳುವುದಷ್ಟೇ ನಿನ್ನ ಕೆಲಸ. ಉಳಿದ ಆರು ಗಿಡುಗಗಳ ವ್ಯವಹಾರದಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೂ ಚಿಂತಿಲ್ಲ. ಒಳ್ಳೆಯ ಗಿರಾಕಿ ಸಿಕ್ಕಿದರೆ, ಹಣದ ಅಗತ್ಯ ಕಂಡುಬಂದರೆ ಅವುಗಳನ್ನು ಮಾರಿದರೂ ಮಾರಿಯೇನು. ನನಗೆ ಈ ಗಾದಾಳ ಆರೈಕೆ ಅತೀ ಮುಖ್ಯ. ಕಣ್ಣಿಗೆ ಎಣ್ಣೆ ಹಚ್ಚಿ ಸಾಕಬೇಕು. ಸತತ ಆರು ತಿಂಗಳು ಉತ್ಕೃಷ್ಟ ತರಬೇತಿ ಕೊಟ್ಟು ನಾನೂ ನೀನೂ ದೋಹಾಕ್ಕೆ ಸಕಲ ತಯಾರಿ ಮಾಡಿಕೊಂಡು ಹೋಗಿ ಸ್ಪರ್ಧಿಸುವುದು. ಇಷ್ಟೆಲ್ಲ ಮಾಡಿಯೂ ಇದು ಗೆಲ್ಲದೇ ಹೋದರೆ ಅಲ್ಲೇ ದೋಹಾದಲ್ಲೇ ಇದರ ಕತ್ತು ಹಿಸುಕಿ ಬಿಸಾಕಿ ನನ್ನ ಪಾಡಿಗೆ ವಿಮಾನ ಹತ್ತಿ ಮರಳುವುದು ನಾನು' ಎಂದ.

ಆತನ ತಣ್ಣನೆಯ ಮಾತಿನ ಕ್ರೂರತೆಗೆ ದೀಪಕನ ದೇಹ ಸಣ್ಣಗೆ ಕಂಪಿಸಿತ್ತು. ಆದರೂ ತಲೆಯಾಡಿಸಿದ ದೀಪಕ್.

'ಮತ್ತೆ ನಿನಗೂ ಈಗಲೇ ವಾರ್ನಿಂಗ್ ಕೊಟ್ಟುಬಿಡುತ್ತೇನೆ. ಈ ಗಾದಾ ನನ್ನ ಸರ್ವಸ್ವ. ನನ್ನ